ಆದಂಥ ಎಂ.ಜಿ. ಪಾಟೀಲ್‌ರವರು ಅನುಮೋದಿಸಿ, ಅಧ್ಯಕ್ಷರಿಗೆ ಇರುವ ಅಧಿಕಾರವನ್ನು ಮೊಟಕುಗೊಳಿಸಿದ್ದಾರೆ. ಈ ಬಗ್ಗೆ ಮೀಟಿಂಗ್ ನೋಟಿಸ್‌ನ ಅಜೆಂಡಾದಲ್ಲಿ ಇಲ್ಲ, ಮತ್ತು ಇದು ಕೋ-ಆಪರೇಟಿವ್ ಕಾನೂನಿಗೆ ವಿರುದ್ಧವಾಗಿರುವಂಥದ್ದು, ಒಬ್ಬ ಎಲೆಕ್ಟೆಡ್ ಪ್ರೆಸಿಡೆಂಟ್‌ನ ಅಧಿಕಾರವನ್ನು ತೆಗೆಯುವಂಥ ಮಟ್ಟಕ್ಕೆ ಒಬ್ಬ ಅಸಿಸ್ಟೆಂಟ್ ರಿಜಿಸ್ಟ್ರಾರ್ ಹೋದರೆ ಈ ರಾಜ್ಯದಲ್ಲಿ ಚುನಾಯಿತ ಪ್ರತಿನಿಧಿಗಳ ಗತಿ ಏನು? ಅದಕ್ಕಾಗಿ ನಾನು ಸರ್ಕಾರಕ್ಕೆ ಒತ್ತಾಯ ಮಾಡುವುದೇನೆಂದರೆ, ಏನು ಅಸಿಸ್ಟೆಂಟ್ ರಿಜಿಸ್ಟ್ರಾರ್ ಕಾನೂನಿಗೆ ವ್ಯತಿರಿಕ್ತವಾಗಿ ನಡೆದುಕೊಂಡಿದ್ದಾರೆ ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕು ಮತ್ತು ಅವರೇನು ದಿ:28-3-2005ರಂದು ಆದೇಶ ಮಾಡಿದ್ದಾರೆ, ಆ ಅಧ್ಯಕ್ಷರ ಅಧಿಕಾರವನ್ನು ಕಿತ್ತು ತೆಗೆದು ಬೇರೆಯವರಿಗೆ ಕೊಡಬೇಕೆಂದು ಏನು ಆದೇಶ ಮಾಡಿದ್ದಾರೆ, ಆದೇಶವನ್ನು ರದ್ದುಪಡಿಸಿ ಚುನಾಯಿತ ಪ್ರತಿನಿಧಿಗೆ ಕೊಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ಅವರ ಮೇಲೆ ಏನು ಅವ್ಯವಹಾರದ ಆರೋಪಗಳಾಗಲಿ ಮತ್ತೊಂದು ಇಲ್ಲ, ಅವರು ಏನಾದರೂ ಕೆಟ್ಟ ಕೆಲಸ ಮಾಡಿದ್ದರೆ, ಅವ್ಯವಹಾರ ಮಾಡಿದ್ದರೆ ನಮ್ಮ ಯಾವ ತಕರಾರು ಇಲ್ಲ. ಆದರೆ ಏಕಾಏಕಿಯಾಗಿ ಯಾವ ಕಾರಣವೂ ಇಲ್ಲದೆ ವಿನಾಕಾರಣ ಆ ಅಧಿಕಾರವನ್ನು ರದ್ದುಗೊಳಿಸಿರುವುದನ್ನು ಕೂಡಲೇ ಆ ಆದೇಶವನ್ನು ರದ್ದುಗೊಳಿಸಿ, ಆ ಆದೇಶವನ್ನು ಮಾಡಿದ ಅಸಿಸ್ಟೆಂಟ್ ರಿಜಿಸ್ಟ್ರಾರ್ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಸಚಿವರು): ಕಾನೂನಿಗಿಂತ ಮಿಗಿಲಾಗಿ ಬೇರೆ ಯಾರೂ ಇರಲಿಕ್ಕೆ ಸಾಧ್ಯತೆ ಇಲ್ಲ. ಕಾನೂನಿನ ವಿರುದ್ಧವಾಗಿ ಅಸಿಸ್ಟೆಂಟ್ ರಿಜಿಸ್ಟ್ರಾರ್‌ರವರು ಕ್ರಮ ಕೈಗೊಂಡಿದ್ದು ನಿಜವಾಗಿದ್ದರೆ ಆ ತನಿಖೆಯಲ್ಲಿ ಅವರ ಮೇಲೆ ಖಂಡಿತವಾಗಿ ಕ್ರಮ ತೆಗೆದುಕೊಳ್ಳುತ್ತೇವೆ. ಈ ವಿಚಾರವನ್ನು ಈಗಲೇ ನಮ್ಮ ಸಹಕಾರ ಮಂತ್ರಿಗಳಿಗೆ ಕೊಟ್ಟು ನಾಳೆ ತಮಗೆ ತಕ್ಕ ಉತ್ತರವನ್ನು ನಾನು ಕೊಡಿಸುತ್ತೇವೆ.

ಶ್ರೀ ಕೆ.ಬಿ. ಬೋಪಯ್ಯ (ಮಡಿಕೇರಿ): ಮಾನ್ಯ ಅಧ್ಯಕ್ಷರೆ, ದಕ್ಷಿಣ ಭಾರತದ ಗಂಗೆ ಎಂದು ಹೇಳುವ ಕಾವೇರಿ ನದಿಗೆ ನನ್ನ ಕ್ಷೇತ್ರದ ಸಿದ್ಧಾಪುರ ಎಂಬಲ್ಲಿ ಅಕ್ರಮವಾಗಿ ದನಗಳನ್ನು ಕಡಿದು ಆ ಹೊಳೆಗೆ ಹಾಕಿ ಇಡೀ ಹೊಳೆ ಕಲ್ಮಶವಾಗಿದೆ. ಎಲ್ಲಾ ಸ್ಥಳೀಯ ಪತ್ರಿಕೆಗಳಲ್ಲಿ ಇದರ ಬಗ್ಗೆ ಫೋಟೋ ಸಮೇತ ಬಂದಿದೆ. ಕಾವೇರಿ ನದಿಯಲ್ಲಿ ದನದ ಮೂಳೆ, ಕೊಂಬು, ಕಲ್ಮಶಗೊಂಡ ಕಾವೇರಿ ಎಂದು ಬಂದಿದೆ. ಈ ರೀತಿಯಾಗಿ ಸುಮಾರು ಎರಡು ತಿಂಗಳಿನಿಂದಲೂ ಸತತವಾಗಿ ಗೋ-ಹತ್ಯೆ ನಡೆದು ಎಲ್ಲಾ ಇಡೀ ನದಿಯೇ ಇವತ್ತು ಕಲ್ಮಶಗೊಂಡಿದೆ. ಜಿಲ್ಲಾ

ಆಡಳಿತಕ್ಕೆ ಮನವಿ ಕೊಟ್ಟರೂ ಏನೂ ಆಗಿಲ್ಲ. ಕೊಡಗಿನ ಜನತೆಗೆ ಕಾವೇರಿ ನದಿಯ ಮೇಲೆ ಭಾವನಾತ್ಮಕವಾದ ಭಾವನೆ ಇದೆ, ಇದರಿಂದ ಯಾರು ಈವತ್ತು ಗೋ ಹತ್ಯೆ ಮಾಡುತ್ತಿದ್ದಾರೆ, ಅವರ ವಿರುದ್ಧ ಏನಾದರೂ ಕ್ರಮ ಕೈಗೊಳ್ಳದಿದ್ದರೆ ಮತ್ತೆ ಜಿಲ್ಲೆಯಲ್ಲಿ ಅಶಾಂತಿಯ ವಾತಾವರಣ ಆಗಬಹುದು. ನಾನು ಸರ್ಕಾರವನ್ನು ವಿನಂತಿ ಮಾಡುತ್ತೇನೆ, ಯಾರು ಈ ರೀತಿಯಾಗಿ ದುಷ್ಕೃತ್ಯದಲ್ಲಿ ತೊಡಗಿದ್ದಾರೆ, ಗೋಪತ್ಯೆ ಮಾಡುತ್ತಿದ್ದಾರೆ, ಅವರ ವಿರುದ್ಧ ಕಠಿಣ ಕ್ರಮಗಳನ್ನು ತೆಗೆದುಕೊಂಡು ಮತ್ತೆ ಜಿಲ್ಲೆಯಲ್ಲಿ ಶಾಂತಿ ನೆಲೆಸುವಂತೆ ಮಾಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಇಲಾಖೆ): ಮಾನ್ಯ ಅಧ್ಯಕ್ಷರೆ, ಈ ವಿಚಾರದಲ್ಲಿ ವ್ಯಾಪಕವಾಗಿ ಪತ್ರಿಕೆಯಲ್ಲಿ ಛಾಯಚಿತ್ರಗಳ ಸಮೇತವಾಗಿ ಬಂದಿರುವುದನ್ನು ನಾವು ನೋಡಿದ್ದೇವೆ. ಇದರ ಹಿನ್ನೆಲೆಯಲ್ಲಿ ಏನಾದರೂ ದೊಡ್ಡ ಜಾಲ ಇದೆಯೋ ಏನೋ ಗೊತ್ತಿಲ್ಲ. ವ್ಯವಸ್ಥಿತವಾಗಿ ಕಲುಷಿತಗೊಳಿಸತಕ್ಕಂಥದ್ದು ಏನು ಇದೆ ಇದು ಶಿಕ್ಷಾರ್ಹವಾದ ಅಪರಾಧ. ಗೋ ಹತ್ಯೆ ಮೊದಲಾದವುಗಳನ್ನು ಮಾಡುವಂಥದ್ದು ಶಿಕ್ಷಾರ್ಹ ಅಪರಾಧಗಳಾಗಿವೆ. ಆ ಕಾರಣಕ್ಕಾಗಿ ಬಹಳ ಗುರುತರವಾದ ವಿಚಾರವನ್ನು ತಾವು ಪ್ರಸ್ತಾಪಿಸಿದ್ದೀರಿ. ನಾನು ಈ ಬಗ್ಗೆ ಅಲ್ಲಿನ ಪೋಲಿಸ್ ಅಧಿಕಾರಿಗಳ ಜೊತೆಗೆ ಮತ್ತು ನೀರಾವರಿ ಇಲಾಖೆಯ ಅಧಿಕಾರಿಗಳ ಜೊತೆಗೆ ವರದಿಯನ್ನು ತರಿಸಿಕೊಂಡು ನಾನು ನಾಳೆ ತಮಗೆ ಉತ್ತರವನ್ನು ಕೊಡುತ್ತೇನೆ.

ಅಧ್ಯಕ್ಷರು : ಈಗ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಮಧ್ಯಾಹ್ನ ಹೇಳಿಕೆ ನೀಡುತ್ತೇನೆಂದು ಹೇಳಿದ್ದರು, ಅವರು ಅಲ್ಲಿದ್ದಾರೆ, ನಂತರ ಇಲ್ಲಿಗೆ ಬರುತ್ತಾರೆ. ಯೋಗೀಶ್ ಭಟ್ ರವರೇ ನಿಮ್ಮದೇನು ಇದೆ ಅದನ್ನು ತಾವು ಕೇಳಿಬಿಡಿ

ಶ್ರೀ ಎನ್. ಯೋಗೀಶ್ ಭಟ್ (ಮಂಗಳೂರು): ಮಾನ್ಯ ಅಧ್ಯಕ್ಷರೆ, ವಿಶೇಷವಾಗಿ ದಕ್ಷಿಣ ಕನ್ನಡ ಜಿಲ್ಲೆ ಮಾತ್ರವಲ್ಲ ಇಡೀ ರಾಜ್ಯದ ಇನ್ನಿತರ ಜಿಲ್ಲೆಗಳಲ್ಲಿರುವ ರಿಕ್ಷಾ ಡ್ರೈವರ್‌ಗಳ ಪರವಾಗಿ ಹಾಗೂ ಟೂರಿಸ್ಟ್ ಟ್ಯಾಕ್ಸಿ ಯಾರು ಇದ್ದಾರೆ ಅವರ ಪರವಾಗಿ ನಾನೊಂದು ವಿನಂತಿ ಮಾಡುತ್ತಿದ್ದೇನೆ. ಪೆಟ್ರೋಲ್ ಮತ್ತು ಡೀಸೆಲ್ ಬೆಲೆ ಏರಿಕೆ ಆಗಿರುವ ಹಿನ್ನೆಲೆಯಲ್ಲಿ, ಈಗಾಗಲೇ ಖಾಸಗಿ ಕಂಪನಿಗಳಿಂದ ಕಮರ್ಷಿಯಲ್ ಗ್ಯಾಸ್ ಆಧಾರಿತವಾದಂಥ ಕಿಟ್‌ಗಳನ್ನು ಕೊಡುತ್ತಿದ್ದಾರೆ. ಇದನ್ನು ಉಪಯೋಗಿಸಿಕೊಂಡು ಅವರು ಸಂಚರಿಸುತ್ತಿದ್ದಾರೆ.